"ಮಧುರ ಆಜ್ಞಾಕಾರಿ ಮಕ್ಕಳೇ - ನೀವು ಸದಾ ಅತೀಂದ್ರಿಯ ಸುಖದಲ್ಲಿರಬೇಕು ಎಂದಿಗೂ ಅಳಬಾರದು, ಏಕೆಂದರೆ ಶ್ರೇಷ್ಠಾತಿ ಶ್ರೇಷ್ಠ ತಂದೆ ಸಿಕ್ಕಿದ್ದಾರೆ"

ಪ್ರಶ್ನೆ: ಅತೀಂದ್ರಿಯ ಸುಖದ ಗಾಯನವು ಗೋಪ ಗೋಪಿಕೆಯರದೇ ಆಗಿದೆ, ದೇವತೆಗಳಿಗೆ ಅತೀಂದ್ರಿಯ ಸುಖದ ಗಾಯನವಿಲ್ಲ ಏಕೆ?

ಉತ್ತರ: ಏಕೆಂದರೆ ನೀವೀಗ ಈಶ್ವರನ ಸಂತಾನರಾಗಿದ್ದೀರಿ. ನೀವು ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವವರಾಗಿದ್ದೀರಿ. ಯಾವಾಗ ದೇವತೆಗಳಾಗಿ ಬಿಡುತ್ತೀರಿ, ಆಗ ಪುನಃ ಇಳಿಯುವುದನ್ನು ಆರಂಭ ಮಾಡುತ್ತಾ ನಿಮ್ಮ ಪದವಿ (ಡಿಗ್ರಿ) ಕಡಿಮೆ ಆಗುತ್ತಾ ಹೋಗುತ್ತದೆ. ಆದುದರಿಂದ ಆ ದೇವತೆಗಳ ಮಹಿಮೆ ಮಾಡುವುದಿಲ್ಲ. ಈ ಅತೀಂದ್ರಿಯ ಸುಖದ ಗಾಯನವು ಸಂಗಮಯುಗದ ಬ್ರಾಹ್ಮಣ ಮಕ್ಕಳ ಗಾಯನವಾಗಿದೆ.

ಗೀತೆ: ನನಗೆ ಆಶ್ರಯ ಕೊಡುವವರು...........

ಓಂ ಶಾಂತಿ. ಇದನ್ನು ಬಾಪ್ದಾದಾರವರಿಬ್ಬರೂ ಹೇಳಿದರೋ ಅಥವಾ ತಂದೆ ಒಬ್ಬರೇ ಹೇಳಿದರೋ? ಏಕೆಂದರೆ ತಂದೆ ಹಾಗು ದಾದಾ ಇಬ್ಬರೂ ಇದ್ದಾರೆ, ಆದುದರಿಂದ ಓಂ ಶಾಂತಿ ಎಂದು ಯಾರು ಹೇಳಿದರು? ಬಾಪ್ದಾದಾ ಇಬ್ಬರೂ ಹೇಳಿದರೆಂದು ಹೇಳಬೇಕಾಗುತ್ತದೆ. ಏಕೆಂದರೆ ಎರಡು ಆತ್ಮಗಳು ಜೊತೆ-ಜೊತೆಯಲ್ಲಿ ಇರುತ್ತಾರೆ. ಒಬ್ಬರು ಆತ್ಮ ಆಗಿದ್ದು ಮತ್ತೊಬ್ಬರು ಪರಮಾತ್ಮ ಆಗಿದ್ದಾರೆ. ಈ ಸಾಕಾರ ಸೃಷ್ಟಿಯಲ್ಲಿರುವವರಿಗೆ ಜೀವಾತ್ಮರೆಂದು ಕರೆಯಲಾಗುತ್ತದೆ. ನೀವು ಆತ್ಮಗಳು ಈ ಸೃಷ್ಟಿಗೆ ಪಾತ್ರ ಮಾಡಲು ಬಂದಿದ್ದೀರಿ. ನಿಮಗೂ ಬೇರೆ ಧರ್ಮದವರಿಗೂ ಸಂಬಂಧವಿಲ್ಲ, ತಂದೆ ಭಾರತದಲ್ಲಿಯೇ ಬರುತ್ತಾರೆ. ಭಾರತ ತಂದೆಯ ಜನ್ಮಸ್ಥಾನವಾಗಿದೆ. ಶಿವ ಜಯಂತಿಯನ್ನು (ಶಿವರಾತ್ರಿ) ಭಾರತದಲ್ಲಿ ಆಚರಣೆ ಮಾಡುತ್ತಾರೆ. ಆದರೆ ಅವರು ಯಾವಾಗ ಹಾಗು ಹೇಗೆ ಬರುತ್ತಾರೆಂದು ಯಾರಿಗೂ ಗೊತ್ತಿಲ್ಲ. ನಿರಾಕಾರನಿಗೆ ಶಿವ ಎಂದು ಹೇಳಲಾಗುತ್ತದೆ. ಅವರನ್ನು ಪೂಜಿಸುತ್ತಾರೆ ಹಾಗು ಶಿವ ಜಯಂತಿಯನ್ನು ಆಚರಣೆ ಮಾಡುತ್ತಾರೆ. ಯಾರು ಹಿಂದೆ ಅಂತಹ ಕರ್ಮ ಮಾಡಿ ಹೋಗಿರುತ್ತಾರೆ, ಅವರ ಮಹಿಮೆಯನ್ನು ಮಾಡುತ್ತಾರೆ. ಆದರೆ ಯಾವಾಗ ಬಂದು, ಏನು ಮಾಡಿದರೆಂದು ತಿಳಿದುಕೊಂಡಿಲ್ಲ. ಈಗ ನೀವು ಮಕ್ಕಳು ತಿಳಿದುಕೊಂಡಿರುವುದರಿಂದ, ನೀವು ಯಾರ ರಾತ್ರಿಯನ್ನು ಆಚರಣೆ ಮಾಡುತ್ತೀರೆಂದು ಯಾರನ್ನಾದರೂ ಕೇಳಬಹುದು. ಇವರು ಯಾರು? ಇವರ ರಾಜ್ಯ ಯಾವಾಗ ಇತ್ತು? ಎಂದು ಮಂದಿರದಲ್ಲಿ ಹೋಗಿ ಕೇಳಬೇಕು. ಪರಮಪಿತ ಪರಮಾತ್ಮನ ಜೊತೆ ನಿಮ್ಮ ಸಂಬಂಧವೇನು? ಅವರ ಜೊತೆ ಯಾವ ಸಂಬಂಧವಿದೆ? ಅಗತ್ಯವಾಗಿ ಇಡೀ ಪ್ರಪಂಚದ ಆತ್ಮಗಳ ಸಂಬಂಧವಿದೆಯೆಂದು ಹಾಗು ಅವರು ಸರ್ವರ ಪರಮಪಿತ ಆಗಿದ್ದಾರೆ ಎಂದು ಹೇಳುತ್ತಾರೆ. ತಂದೆಯಿಂದ ಅವಶ್ಯವಾಗಿ ಸುಖದ ಆಸ್ತಿ ಸಿಗಬೇಕಾಗುತ್ತದೆ. ಈ ಸಮಯದಲ್ಲಿ ದುಃಖದ ಪ್ರಪಂಚವಿದೆ. ಒಂದುವೇಳೆ ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಿದ್ದರೂ ಸಹ ದಿನ ಪ್ರತಿದಿನ ದುಃಖವು ಹೆಚ್ಚುತ್ತಾ ಹೋಗುತ್ತಿದೆ. ಏಕೆಂದರೆ ಇದು ಇಳಿಯುವ ಕಲೆಯ ಸಮಯವಾಗಿದೆ. ಆದುದರಿಂದ ತುಂಬಾ ಆಪತ್ತುಗಳು ಬರುತ್ತಿರುತ್ತವೆ, ಮನುಷ್ಯರಂತೂ ಇಂತಹ ಭಯಂಕರ ದುಃಖವನ್ನು ನೋಡಲೇ ಬೇಕಾಗುತ್ತದೆ. ಅಂತ್ಯದ ವೇಳೆಗೆ ಅತೀ ದುಃಖವಾಗಿ ಮನುಷ್ಯರು ತ್ರಾಹಿ-ತ್ರಾಹಿ (ಸಾಕಪ್ಪಾ-ಸಾಕು) ಎಂದು ಮಾಡಲು ಪ್ರಾರಂಭಿಸಿದಾಗ ಈ ದುಃಖದ ಪ್ರಪಂಚದಲ್ಲಿ ತಂದೆ ಬರುತ್ತಾರೆ. ಈ ಸಮಯದಲ್ಲಿ ಎಲ್ಲಾ ಮನುಷ್ಯ ಮಾತ್ರರು ಪತಿತರಾಗಿದ್ದಾರೆ ಆದುದರಿಂದ ಈ ಪ್ರಪಂಚವನ್ನು ವಿಕಾರೀ ಪ್ರಪಂಚವೆಂದು ಹೇಳಲಾಗುತ್ತದೆ. ಈ ನಾಟಕವೇ ಈ ರೀತಿ ಮಾಡಲ್ಪಟ್ಟಿದೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಈ ಸಮಯದಲ್ಲಿ ಎಲ್ಲರೂ ರಾವಣ ಅರ್ಥಾತ್ ಪಂಚಭೂತಗಳ ವಶದಲ್ಲಿದ್ದಾರೆ. ಈ ರಾವಣ ಶತ್ರು ಆಗಿದ್ದಾನೆ. ದುಃಖದ ಕಲೆಗಳು ಇರುತ್ತವಯಲ್ಲವೆ. ಈಗಂತೂ ಬಹಳ ತಮೋಪ್ರಧಾನ ಆಗಿ ಬಿಟ್ಟಿದೆ, ಏಕೆಂದರೆ ಎಲ್ಲರೂ ವಿಷದಿಂದ ಜನ್ಮ ಪಡೆಯುತ್ತಾರೆ. ಸತ್ಯಯುಗದಲ್ಲಿ ವಿಷ ಇರುವುದಿಲ್ಲವೆಂದು ಪ್ರಪಂಚದವರಿಗೆ ಗೊತ್ತಿಲ್ಲ. ಆದುದರಿಂದ ಸತ್ಯಯುಗದಲ್ಲಿ ಮಕ್ಕಳ ಜನ್ಮ ಹೇಗೆ ಆಗುತ್ತದೆ ಎಂದು ಕೇಳುತ್ತಾರೆ. ಆಗ ಅವರಿಗೆ ನೀವು ಮೊದಲು ತಂದೆಯನ್ನು ತಿಳಿದುಕೊಂಡು ಆಸ್ತಿಯನ್ನು ಪಡೆದುಕೊಳ್ಳಿ ಎಂದು ಅವರಿಗೆ ಹೇಳಬೇಕು. ಉಳಿದಂತೆ ಅಲ್ಲಿಯ ಪದ್ಧತಿಗೆ ಅನುಗುಣವಾಗಿ ಎಲ್ಲವೂ ನಡೆಯುತ್ತದೆ, ಈ ರೀತಿ ನೀವು ಏಕೆ ಸಂಶಯ ಪಡುತ್ತೀರೆಂದು ತಿಳಿಸಬೇಕು. ಯಾರೋ ಒಬ್ಬರು ಈ ರೀತಿ ಪ್ರಶ್ನೆ ಕೇಳಿದ್ದರು - ಯಾವಾಗ ಶಿವ ತಂದೆ ಇಲ್ಲಿರುತ್ತಾರೆ ಆಗ ಆ ಮೂಲ ವತನದಲ್ಲಿ ಆತ್ಮಗಳು ಇರುವರೇನು? ಅಗತ್ಯವಾಗಿ ಪರಮಧಾಮದಲ್ಲಿ ಆತ್ಮಗಳು ಇರುವ ಕಾರಣವೇ ಈ ಸಾಕಾರ ಪ್ರಪಂಚದಲ್ಲಿ ಜನಸಂಖ್ಯೆಯ ವೃದ್ಧಿ ಆಗುತ್ತಿರುತ್ತದೆ. ಆದರೆ ಮೂಲ ಮಾತು ಮೊದಲನೆಯದಾಗಿ-ತಂದೆ ಹಾಗು ಆಸ್ತಿಯನ್ನು ನೆನಪು ಮಾಡಬೇಕು. ಈ ಮಾತುಗಳೊಂದಿಗೆ ನಿಮ್ಮ ಸಂಬಂಧವೇನು? ಯಾವಾಗ ನಿಮ್ಮ ಜ್ಞಾನದ ನೇತ್ರವು ತೆರದು ಬಿಡುತ್ತದೆ, ಆಗ ನಿಮ್ಮಲ್ಲಿ ಯಾವ ಪ್ರಶ್ನೆಯೂ ಇರುವುದಿಲ್ಲ. ತಂದೆಯು ನನ್ನನ್ನು ಹಾಗೂ ಆಸ್ತಿಯನ್ನು ನೆನಪು ಮಾಡಿ ಎಂದು ತಿಳಿಸುತ್ತಾರೆ. ನಿಮಗೆ ಕೇವಲ ಮುಕ್ತಿ ಬೇಕೆಂದರೆ ಮನ್ಮನಾಭವ ಅರ್ಥಾತ್ ಮನಸ್ಸನ್ನು ನನ್ನಲ್ಲಿಡಿ. ರಾಜ್ಯಭಾಗ್ಯ ಬೇಕೆಂದರೆ ಮಧ್ಯಾಜೀ ಭವ. ಅರ್ಥಾತ್

ಆಸ್ತಿಯನ್ನು ನೆನಪು ಮಾಡಿ.

ನಮಗೆ ಓದಿಸುವವರು ಯಾರಾಗಿದ್ದಾರೆ? ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಈ ಚೈತನ್ಯ ಡಬ್ಬಿಯಲ್ಲಿ ಚೈತನ್ಯವಾದ ವಜ್ರ ಕುಳಿತುಕೊಂಡಿದ್ದಾರೆ. ಅವರು ಸತ್ಚಿತನಾಗಿದ್ದು ಪರಮಾತ್ಮನೇ ಈ ಶರೀರದಿಂದ ಮಾತನಾಡುತ್ತಾರೆ. ಒಂದುವೇಳೆ ಯಾರಾದರೂ ಶರೀರ ಬಿಟ್ಟಾಗ ಅವರ ಆತ್ಮನನ್ನು ಕರೆಯಲಾಗುತ್ತದೆ, ಹಾಗೆಯೇ ಬ್ರಹ್ಮಾರವರ ಶರೀರವೆಂಬ ಡಬ್ಬಿಯಲ್ಲಿ ಶಿವ ತಂದೆ ಎಂಬ ವಜ್ರ ಇದ್ದಾರೆಂದು ನಾವು ಮಕ್ಕಳು ತಿಳಿದುಕೊಂಡಿದ್ದೇವೆ. ಬಾಪ್ದಾದಾ ಇಬ್ಬರೂ ಜೊತೆಯಲ್ಲಿ ಇರುತ್ತಾರೆ. ಬ್ರಹ್ಮನ ಆತ್ಮ ಭಾವನೆಯನ್ನು ಸ್ವೀಕಾರ ಮಾಡುತ್ತದೆ. ಏಕೆಂದರೆ ತಂದೆಯು ಅಭೋಕ್ತ ಆಗಿದ್ದಾರೆ. ಆತ್ಮ ಭಾವನೆಯನ್ನು ಸ್ವೀಕಾರ ಮಾಡುತ್ತದೆ, ಆದರೆ ತಂದೆ ನಾನು ಅಭೋಕ್ತನಾಗಿದ್ದೇನೆಂದು ಹೇಳುತ್ತಾರೆ. ಆತ್ಮವು ಇಚ್ಛೆಯ ಬಂಧನದಲ್ಲಿ ಇರುತ್ತದೆ. ನಾನು ಆ ಇಚ್ಛೆಯ ಬಂಧನದಲ್ಲಿಲ್ಲ. ನೀವು ನನ್ನ ಜೊತೆ ಸಂಬಂಧ ಜೋಡಿಸುವುದರಿಂದ ನಿಮ್ಮ ವಿಕರ್ಮ ವಿನಾಶವಾಗಿ ಬಿಡುತ್ತದೆ. ಶಿವ ಜಯಂತಿಯನ್ನು ಆಚರಣೆ ಮಾಡುವಾಗ ಶಿವ ನಿರಾಕಾರನೆಂದು ತಿಳಿಸಬೇಕು. ಹೇಗೆ ಆತ್ಮ ಶರೀರದಲ್ಲಿ ಬಂದು ಪ್ರವೇಶ ಮಾಡಿದಾಗ ಆತ್ಮದ ಜಯಂತಿಯನ್ನು ಆಚರಣೆ ಮಾಡುತ್ತಾರೆ. ಶಿವ ತಂದೆಯು ಪತಿತ ಪಾವನರಾಗಿದ್ದು, ಅವರನ್ನು ಈ ರಾವಣನ ದುಃಖದಿಂದ ಬಿಡುಗಡೆ ಮಾಡಬೇಕೆಂದು ಆಹ್ವಾನ ಮಾಡುತ್ತೇವೆ. ಈ ಸಮಯದಲ್ಲಿ ಪಂಚ ವಿಕಾರಗಳು ಸರ್ವವ್ಯಾಪಿಯಾಗಿವೆ. ಏಕೆಂದರೆ ಅರ್ಧ ರಾಮ ರಾಜ್ಯ, ಅರ್ಧ ರಾವಣ ರಾಜ್ಯವಾಗಿದೆ. ಯಾವಾಗ ರಾವಣ ರಾಜ್ಯ ಪ್ರಾರಂಭವಾಗುತ್ತದೆಯೋ, ಆಗ ಬೇರೆ ಬೇರೆ ಧರ್ಮಗಳು ಉದಯವಾಗುತ್ತವೆ. ಪ್ರತಿಯೊಬ್ಬರೂ ತಮ್ಮ-ತಮ್ಮ ಪಾತ್ರ ಮಾಡಲು ಬರಬೇಕಾಗುತ್ತದೆ. ನಾನು ಭಾರತದಲ್ಲಿಯೇ ಬರುತ್ತೇನೆ. ಈ ಚೈತನ್ಯ ಡಬ್ಬಿ (ಬ್ರಹ್ಮಾ ಬಾಬಾ) ಯಲ್ಲಿ ಕವಡೆಯಿಂದ ವಜ್ರ ಸಮಾನ ಮಾಡುವಂತಹ ತಂದೆ ಕುಳಿತಿದ್ದಾರೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಅವರೇ ಸತ್, ಚಿತ್, ಆನಂದ ಸ್ವರೂಪ ಹಾಗೂ ಜ್ಞಾನ ಸಾಗರ ಆಗಿದ್ದಾರೆ. ನೀವೀಗ ತಿಳಿದುಕೊಂಡಿದ್ದೀರಿ - ತಂದೆ ನಮಗೆ ನೆನಪು ಮಾಡಲು ತಿಳಿಸುತ್ತಿದ್ದರೂ ಮತ್ತೆ ನಾವು ನೆನಪನ್ನು ಮರೆತು ಹೋಗುತ್ತೇವೆ. ಏಕೆಂದರೆ ತಂದೆಗೆ ತಮ್ಮದೇ ಆದ ಶರೀರವಿಲ್ಲ, ಪೋಪ್ ಮೊದಲಾದವರಿಗೆ ತಮ್ಮದೇ ಆದ ಶರೀರವಿದ್ದು ಪ್ರಖ್ಯಾತಿ ಆಗುತ್ತಾರೆ. ಆದುದರಿಂದ ಅವರ ಮಹಿಮೆಯನ್ನು ಬಹಳ ಮಾಡುತ್ತಾರೆ. ಈ ಡಬ್ಬಿಯಲ್ಲಿ ಕಾಣದಂತೆ ಇರುವ ವಜ್ರವಿದೆ. ಅವರು ಈ ಸೃಷ್ಟಿಗೆ ಕಲ್ಪಕ್ಕೆ ಒಮ್ಮೆ ಮಾತ್ರ ಬರುವರೆಂದು ಯಾರೂ ತಿಳಿದುಕೊಂಡಿಲ್ಲ. ಆದರೆ ಮಕ್ಕಳು, ಶಿವ ತಂದೆ ಬ್ರಹ್ಮಾ ತಂದೆಯ ಭೃಕುಟಿಯೆಂಬ ಡಬ್ಬಿಯಲ್ಲಿ ಕುಳಿತುಕೊಂಡಿದ್ದಾರೆಂದು ತಿಳಿದುಕೊಂಡಿದ್ದೀರಿ. ಅವರು ನಮ್ಮ ಸತ್ಚಿತ ಸತ್ಶಿಕ್ಷಕ ಆಗಿದ್ದಾರೆ. ಇದು ಪಾಠಶಾಲೆಯಾಗಿದೆ. ನಿಮ್ಮಲ್ಲಿ ಕೆಲವರು ತಂದೆಯನ್ನು ಮರೆತು ಬಿಡುತ್ತಾರೆ. ಏಕೆಂದರೆ ಅವರ ನಡವಳಿಕೆಯಿಂದ ಎಲ್ಲವೂ ತಿಳಿಯುತ್ತಿರುತ್ತದೆ. ಈ ರೀತಿ ಕೆಲವು ಮಕ್ಕಳು ಜ್ಞಾನ ಮಾರ್ಗದಲ್ಲಿ ನಡೆಯುತ್ತಾ ಸ್ವಲ್ಪ ಪರೀಕ್ಷೆ ಬಂದರೆ ಸಾಕು ಮಾಯೆಗೆ ವಶವಾಗಿ ಬಿಡುತ್ತಾರೆ. ಇಲ್ಲವಾದರೆ ತಂದೆ ಏನು ತಿನ್ನಿಸುತ್ತಾರೆ ಅದನ್ನೇ ತಿನ್ನುತ್ತೇವೆ, ಒಂದುವೇಳೆ ಶಿಕ್ಷೆ ಕೊಡಲಿ ಅಥವಾ ಪ್ರೀತಿ ಮಾಡಲಿ ಮಕ್ಕಳು ತಂದೆಯನ್ನು ಬಿಟ್ಟು ಹೋಗುವುದಿಲ್ಲವೆಂದು ಹೇಳಬೇಕು. ಸುಪುತ್ರ ಮಕ್ಕಳು ಆಜ್ಞಾಕಾರಿಗಳಾಗಿರುತ್ತಾರೆ. ಮಕ್ಕಳೇ ನೀವೆಂದಿಗೂ ಅಳಬಾರದು. ನಿಮಗೆ ಇಷ್ಟೊಂದು ಹಿರಿಯ ತಂದೆ ಹಾಗೂ ಪ್ರಿಯತಮನಿಗೆ ಮಕ್ಕಳಾಗಿ ಮತ್ತೆ ನೀವು ಅಳುತ್ತೀರಿ! ಎಂದು ತಂದೆ ತಿಳಿಸುತ್ತಾರೆ. ನಾನು ನಿಮ್ಮ ಸರ್ವ ಶ್ರೇಷ್ಠ ತಂದೆ ಕುಳಿತುಕೊಂಡಿದ್ದೇನೆ. ಮಾಯೆ ಮಕ್ಕಳ ಮೂಗನ್ನು ಹಿಡಿದುಕೊಳ್ಳುವ ಕಾರಣ ದುಃಖಿಗಳಾಗುತ್ತೀರಿ. ಅತೀಂದ್ರಿಯ ಸುಖ ಗೋಪ-ಗೋಪಿಕೆಯರನ್ನು ಕೇಳಬೇಕೆಂಬ ಗಾಯನವಿದೆ. ಆದರೆ ಮಾಯೆ ಮಕ್ಕಳಿಂದ ಮರೆಯುವಂತೆ ಮಾಡಿ ಬಿಡುತ್ತದೆ. ತಂದೆಗೆ ಅರ್ಪಣೆ ಆಗಿರುವ, ಬಲಿಹಾರಿ ಆಗಿರುವ ನೆನಪು ಅಂತರ್ಯದಲ್ಲಿದಾಗ ಖುಷಿ ಇರುತ್ತದೆ. ತಂದೆ ಸತ್ಯ-ಸತ್ಯ ಇಂದ್ರನಾಗಿದ್ದಾರೆಂದು ನೀವು ಮಕ್ಕಳೀಗ ತಿಳಿದುಕೊಂಡಿದ್ದೀರಿ. ಆ ಮಳೆಯನ್ನು ಸುರಿಸುವ ಇಂದ್ರನಲ್ಲ, ಇವರು ಜ್ಞಾನದ ಮಳೆಯನ್ನು ಸುರಿಸುವ ಇಂದ್ರ ಆಗಿದ್ದಾರೆ. ಕಾಮನ ಬಿಲ್ಲು ಮೂಡಿದಾಗ ಅದು ತುಂಬಾ ಬಣ್ಣಗಳಿಂದ ಕೂಡಿರುತ್ತದೆ, ಅವುಗಳಲ್ಲಿ ಮುಖ್ಯ ಮೂರು ಬಣ್ಣಗಳಿರುತ್ತವೆ. ಬಾಬಾ ನಿಮಗೆ ಈ ಸಮಯದಲ್ಲಿ ತ್ರಿಕಾಲದರ್ಶಿಗಳನ್ನಾಗಿ ಮಾಡುತ್ತಾರೆ. ತ್ರಿಕಾಲದರ್ಶಿ ಅರ್ಥಾತ್ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಂಡಿರುವವರು. ಅಂದರೆ ಸ್ವದರ್ಶನ ಚಕ್ರಧಾರಿಗಳೆಂದು ಅರ್ಥ. ಮೂರು ಕಾಲಗಳನ್ನು ತಿಳಿದಿರುವವರು - ಈ ಮಾತುಗಳೆಲ್ಲವು ನಿಮಗೆ ಮಾತ್ರ ಸಂಬಂಧವಿದೆ. ಇದು ಇಂದ್ರ ಸಭೆಯೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಆದುದರಿಂದ ತಂದೆಯು ಮಕ್ಕಳಿಗೆ ಬರೆಯುತ್ತಾರೆ - ಯಾವುದೇ ವಿಕಾರಿ, ಅಶುದ್ಧರು ನನ್ನ ಸಭೆಯಲ್ಲಿ ಬರಬಾರದು. ನೀವು ಜ್ಞಾನ ನೃತ್ಯ ಮಾಡುವಂತಹ ಅಪ್ಸರೆ (ಪರಿ) ಆಗಿದ್ದೀರಿ. ಜ್ಞಾನ ಇಂದ್ರನು ತನ್ನ ಪರಿಗಳಿಗೆ ಆಜ್ಞೆ ಮಾಡುತ್ತಾರೆ-ಯಾವುದೇ ವಿಕಾರಿ ಮನುಷ್ಯರನ್ನು ಇಲ್ಲಿಗೆ ಕರೆದುಕೊಂಡು ಬರಬಾರದು. ಮಕ್ಕಳ ಬಳಿ ವಿಕಾರಿಗಳನ್ನು ನಿರ್ವಿಕಾರಿಗಳನ್ನಾಗಿ ಮಾಡಲು ಕರೆದುಕೊಂಡು ಬರುತ್ತಾರೆ. ಆದರೆ ನನ್ನ ಈ ಇಂದ್ರ ಸಭೆಗೆ ಕರೆದುಕೊಂಡು ಬರಬಾರದು. ನಿಯಮವಿದೆಯಲ್ಲವೆ. ಹಾಗೆ ನೋಡಿದರೆ ಒಮ್ಮೊಮ್ಮೆ ನಾನು ಇಲ್ಲಿ ಅನೇಕರೊಂದಿಗೆ ಮಾತನಾಡುತ್ತೇನೆ. ಪ್ರಾಮಾಣಿಕ ಸುಪುತ್ರ ಮಗು ಆಗಿದ್ದರೆ ಪ್ರೀತಿಯ ಆಕರ್ಷಣೆ ಆಗುತ್ತದೆ. ಹೇಗೆ ಉತ್ತಮ ಕರ್ಮ ಮಾಡಿರುವ ಕಾರಣ ಗಾಂಧೀಜಿಯವರ ಬಗ್ಗೆ ಎಲ್ಲರಿಗೂ ಪ್ರೀತಿಇದೆ. ಅದೇರೀತಿ ಈ ನಾಟಕವು ಮಾಡಿ ಮಾಡಲ್ಪಟ್ಟಿದ್ದು, ಹಿಂದಿನಂತೆ ಚಾಚೂ ತಪ್ಪದೆ ಪುನರಾವರ್ತನೆ ಆಗುತ್ತಿದೆ ಎಂದು ತಿಳಿದುಕೊಳ್ಳಬೇಕು. ಆದುದರಿಂದ ಈ ನಾಟಕದಲ್ಲಿ ಪ್ರತಿಯೊಬ್ಬರ ಪಾತ್ರ ನಿಗಧಿಯಾಗಿರುವ ಕಾರಣ ಯಾರ ದೋಷವು ಇಲ್ಲ. ರಾವಣನು ಎಲ್ಲರನ್ನು ಭ್ರಷ್ಟಾಚಾರಿಗಳನ್ನಾಗಿ ಮಾಡಲೇಬೇಕಾಗಿದೆ. ಈ ಎಲ್ಲಾ ಮಾತುಗಳನ್ನು ನಿಮ್ಮ ವಿನಃ ಬೇರೆ ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ತಂದೆಗೆ ಪತಿತ-ಪಾವನನೆಂದು ಹೇಳಿದರು ಸಹ ತಂದೆಯನ್ನೇ ಯಥಾರ್ಥವಾಗಿ ತಿಳಿದುಕೊಂಡಿಲ್ಲ. ಕಲ್ಪದ ಹಿಂದೆ ಯಾರು ತಂದೆಗೆ ಸಹಯೋಗವನ್ನು ನೀಡಿದ್ದರು, ಅವರು

ನೀವಾಗಿದ್ದೀರಿ. ನಾವು ಈ ರಾಜ್ಯವನ್ನು ಹೇಗೆ ಪಡೆದುಕೊಂಡೆವೆಂದು ನೆನಪಿರುವುದಿಲ್ಲ.

ಈ ಬೇಹದ್ದಿನ ತಂದೆ ಎಷ್ಟೊಂದು ದೊಡ್ಡ ಆಸಾಮಿ ಆಗಿದ್ದಾರೆಂದು ನೀವೀಗ ತಿಳಿದುಕೊಂಡಿದ್ದೀರಿ. ತಂದೆಯೇ ಭಾರತವನ್ನು ಕವಡೆಯಿಂದ ವಜ್ರ ಸಮಾನ ಮಾಡುತ್ತಾರೆ. ಸ್ವರ್ಗದಲ್ಲಿ ಒಂದೇ ದೇವೀ-ದೇವತಾ ಧರ್ಮವಿತ್ತು, ಆ ಧರ್ಮ ಪುನಃ ಸ್ಥಾಪನೆ ಆಗುತ್ತದೆ. ಇಡೀ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಮಾಡುವುದು ಪರಮಪಿತ ಪರಮಾತ್ಮನ ಜವಾಬ್ದಾರಿ ಆಗಿದೆ. ಆ ತಂದೆಯೇ ಬಂದು ಎಲ್ಲರನ್ನು ಧನಿಕರನ್ನಾಗಿ ಮಾಡುತ್ತಾರೆ ಹಾಗೂ ನೀವು ನಿಧನಿಕರು ಏಕೆ ಆಗಬೇಕಾಯಿತೆಂದೂ ಸಹ ತಿಳಿಸಿಕೊಡುತ್ತಾರೆ. ರಾವಣ ರಾಜ್ಯದ ಆರಂಭ ಎಂದಿನಿಂದ ಆಗುತ್ತದೆಯೆಂದು ನೀವು ತಿಳಿದುಕೊಳ್ಳದೇ ರಾವಣನ ಪ್ರತಿ ರೂಪವನ್ನು ಮಾಡಿ ಸುಡುತ್ತಿರುತ್ತಾರೆ. ಈ ಸಮಯ ಭಕ್ತಿ ಮಾರ್ಗದ ಇಳಿಯುವ ಕಲೆ ಆಗಿದೆ. ರಾಮ ರಾಜ್ಯವೆಂದು ಸತ್ಯಯುಗಕ್ಕೆ ಕರೆಯಲಾಗುತ್ತದೆ. ನೀವು ಈ ಸಮಯದಲ್ಲಿ ಈಶ್ವರೀಯ ಸಂತಾನರಾದ್ದರಿಂದ ನಿಮ್ಮಲ್ಲಿ ತುಂಬಾ ಘನತೆ ಇರಬೇಕು. ನೀವು ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವವರಾಗಿದ್ದೀರಿ. ಅತೀಂದ್ರಿಯ ಸುಖವು ಸಹ ಗೋಪ-ಗೋಪಿಕೆಯರ ಗಾಯನವಾಗಿದೆ. ಅತೀಂದ್ರಿಯ ಸುಖದ ಅನುಭವ ಲಕ್ಷ್ಮೀ-ನಾರಾಯಣರನ್ನು ಕೇಳಿ ಎಂದು ಯಾವ ಶಾಸ್ತ್ರದಲ್ಲಿ ಹೇಳಿರುವುದಿಲ್ಲ. ಆದರೆ ನೀವು ಈಶ್ವರೀಯ ಸಂತಾನರಾಗಿರುವ ಕಾರಣ ಗೋಪ ಗೋಪಿಕೆಯರೆಂದು ಹೇಳಲಾಗುತ್ತದೆ. ದೇವತೆಗಳಾದ ನಂತರ ನಮ್ಮ ಪದವಿ ಕಡಿಮೆ ಆಗುತ್ತಾ ಬರುತ್ತದೆ. ರಾಜರು ಎಷ್ಟೊಂದು ಅಶ್ಲೀಲವಾಗಿ ನಡೆದುಕೊಳ್ಳುತ್ತಾರೆ, ಏಕೆಂದರೆ ಎಲ್ಲರೂ ತಮೋಪ್ರಧಾನರಾಗಿ ಬಿಟ್ಟಿದ್ದಾರೆ.

ನಿಮ್ಮ ಬಳಿ ಇರುವ ಬ್ರಹ್ಮನ ಚಿತ್ರವನ್ನು ನೋಡಿ ಬಹಳ ಜನ ಗೊಂದಲವಾಗುತ್ತಾರೆ. ಹೀಗೆ ಮಕ್ಕಳ ಬಳಿ ಲಕ್ಷ್ಮೀ ನಾರಾಯಣರ ಚಿತ್ರವು ಒಂದು ತ್ರಿಮೂರ್ತಿ ಸಹಿತ ಇದೆ, ಇನ್ನೊಂದು ತ್ರಿಮೂರ್ತಿ ಇಲ್ಲದೆ ಇರುವ ಚಿತ್ರ ಇದೆ. ಕೇವಲ ಶಿವ ತಂದೆಯನ್ನಷ್ಟೆ ತೋರಿಸಿದ್ದಾರೆ. ಆದರೆ ಲಕ್ಷ್ಮೀ ನಾರಾಯಣ ಹಾಗೂ ತ್ರಿಮೂರ್ತಿಗಳಿರುವ ಒಂದೇ ಚಿತ್ರವನ್ನು ಮಾಡಬೇಕು. ಒಂದುವೇಳೆ ಯಾರಾದರೂ ಬ್ರಹ್ಮನನ್ನು ಕುಳಿತು ಕೇಳಿದಾಗ ಬ್ರಹ್ಮನ ಶರೀರದಲ್ಲಿ ಶಿವ ತಂದೆ ಪ್ರವೇಶ ಮಾಡುತ್ತಾರೆಂದು ಹೇಳಬಹುದು. ಈ ಬ್ರಹ್ಮಾ ಸರಸ್ವತಿ ನಂತರ ಲಕ್ಷ್ಮೀ-ನಾರಾಯಣರಾಗುತ್ತಾರೆ. ಬ್ರಾಹ್ಮಣರನ್ನು ಮಾಡಲು ಅಗತ್ಯವಾಗಿ ಬ್ರಹ್ಮನ ಶರೀರದಲ್ಲಿಯೇ ಬರಬೇಕಾಗುತ್ತದೆ. ಇಲ್ಲವಾದರೆ ಇಷ್ಟೊಂದು ಬ್ರಾಹ್ಮಣರು ಎಲ್ಲಿಂದ ಬರುತ್ತಾರೆ, ಈ ಎಲ್ಲಾ ಬ್ರಹ್ಮಾಕುಮಾರ-ಕುಮಾರಿಯರು ಬ್ರಹ್ಮನ ಮಕ್ಕಳಾಗಿದ್ದಾರೆ. ನೀವೆಲ್ಲರೂ ಬ್ರಹ್ಮಾಕುಮಾರಿಯರಾಗಿದ್ದೀರಿ, ಪ್ರಜಾಪಿತನಿಲ್ಲದೆ ಸೃಷ್ಟಿಯು ಹೇಗೆ ರಚನೆ ಆಗುತ್ತದೆ? ಈಗ ತಂದೆ ಹೊಸ ಸೃಷ್ಟಿಯನ್ನು ರಚಿಸುತ್ತಿದ್ದಾರೆ. ನೀವೂ ಸಹ ರಚನೆ ಆಗಿದ್ದೀರಿ ಆದರೆ ಮಾನ್ಯತೆ ಮಾಡುವುದಿಲ್ಲ. ಈಗ ಬ್ರಾಹ್ಮಣರಾಗದಿದ್ದರೆ ದೇವತೆಗಳು ಆಗಲು ಸಾಧ್ಯವಿಲ್ಲ. ಯಾರು ದೇವತಾ ಕುಲದ ಸಸಿ ಆಗಿರುತ್ತಾರೆ ಅವರು ಮಾತ್ರ ಇಲ್ಲಿಗೆ ಬರುತ್ತಾರೆ. ಬಾಬಾ ಎಷ್ಟೊಂದು ಚೆನ್ನಾಗಿ ತಿಳಿಸಿಕೊಡುತ್ತಾರೆ, ಏಕೆಂದರೆ ತಂದೆಯು ಪ್ರತಿಯೊಬ್ಬ ಪುರುಷಾರ್ಥಿಯ ಸ್ಥಿತಿಯನ್ನು ತಿಳಿದುಕೊಂಡಿರುತ್ತಾರೆ. ಕೆಲವರು ಕೆಲವು ವಸ್ತುಗಳ ಆಸೆಯಲ್ಲಿರುತ್ತಾರೆ, ಕೆಲವರು ಶೃಂಗಾರದ ಆಸೆಯನ್ನು ಇಟ್ಟುಕೊಂಡಿರುತ್ತಾರೆ. ಬಾಬಾ ನಾವು ಯಥಾರ್ಥವಾಗಿ ನಡೆಯುತ್ತಿದ್ದೇವೆಯೇ ಎಂದು ತಂದೆಯನ್ನು ಕೇಳಬೇಕು. ನಮ್ಮ ಮಾತು ಸತ್ಯ ಅಥವಾ ಅಸತ್ಯವಾಗಿದೆಯೇ? ಎಂದು ತಿಳಿದುಕೊಳ್ಳಬೇಕು. ಆಗ ತಂದೆ ಈ ಮಕ್ಕಳಿಗೆ ಪುರುಷಾರ್ಥದ ಬಗ್ಗೆ ಭಯವಿದೆ ಎಂದು ತಿಳಿದುಕೊಳ್ಳುತ್ತಾರೆ. ಹೇಗೆ ಗಾಂಧೀಜಿಯವರಿಗೆ ಎಲ್ಲರೂ ಎಷ್ಟೊಂದು ಸಹಾಯ ಮಾಡಿದರು, ಆದರೆ ಗಾಂಧಿ ಎಂದಿಗೂ ಸ್ವಯಂ ಸುಖವನ್ನು ಪಡೆಯದೇ ದೇಶಕ್ಕೆ ಮಾಡಿದರು. ಆದರೂ ಗಾಂಧೀಜಿಯು ಸಹ ಮನುಷ್ಯರಲ್ಲವೇ, ಆದರೆ ಇಲ್ಲಿಗೆ ಇವರು ಬೇಹದ್ದಿನ ತಂದೆ ಆಗಿದ್ದಾರೆ. ಶಿವ ತಂದೆ ದಾತ ಆಗಿದ್ದು, ಎಲ್ಲವನ್ನು ಮಕ್ಕಳ ಸಲುವಾಗಿಯೇ ಮಾಡುತ್ತಾರೆ. ನೀವು ಒಂದು ರೂಪಾಯಿ ಏಕೆ ಕೊಡುತ್ತೀರೆಂದು ಕೇಳಲಾಗುತ್ತದೆ? 21 ಜನ್ಮಗಳಿಗೆ ಆಸ್ತಿ ಪಡೆಯಲು ಶಿವ ತಂದೆಗೆ ಕೊಡುತ್ತೇವೆಂದು ಹೇಳುತ್ತಾರೆ. ನಾನು 21 ಜನ್ಮಗಳ ಆಸ್ತಿ ತೆಗೆದುಕೊಳ್ಳುತ್ತೇನೆ, ಆದ್ದರಿಂದ ನಾನೇ ಕೊಟ್ಟನೆಂದು ಹೇಳಬಾರದು. ಬಾಬಾ ಬಡವರ ಬಂಧು ಆಗಿದ್ದಾರೆ. ತಂದೆ ನಮಗೆ 21 ಜನ್ಮಗಳ ಆಸ್ತಿ ಕೊಡುತ್ತಾರೆಂದು ಬುದ್ಧಿಯಲ್ಲಿರಬೇಕು. ತಂದೆಯದೆಲ್ಲವು ಮಕ್ಕಳ ಉಪಯೋಗಕ್ಕಾಗಿ ಬರುತ್ತದೆ. ಗಾಂಧೀಜಿಯೂ ಸಹ ಭಾರತದ ಸೇವೆಯಲ್ಲಿ ತೊಡಗಿಸುತ್ತಾ ಸ್ವಲ್ಪ ಮಾತ್ರವನ್ನೂ ತನಗಾಗಿ ಜಮಾ ಮಾಡಿಕೊಳ್ಳಲಿಲ್ಲ. ತಮ್ಮ ಬಳಿ ಇದ್ದಂತಹ ಎಲ್ಲವನ್ನು ಅರ್ಪಣೆ ಮಾಡಿ ಬಿಟ್ಟರು, ಕೊಡುವಂತಹ ದಾತಾ ಎಂದಿಗೂ ತನಗಾಗಿ ಇಟ್ಟುಕೊಳ್ಳುವುದಿಲ್ಲ. ಸನ್ಯಾಸಿಗಳಂತೂ ಎಲ್ಲವನ್ನು ಬಿಟ್ಟು ಹೋದರೂ ಸಹ ಪುನಃ ಬಂದು ಎಲ್ಲವನ್ನು ಮಾಡಿಕೊಳ್ಳುತ್ತಾರೆ. ಸನ್ಯಾಸಿಗಳ ಬಳಿ ಬಹಳ ಹಣ ಹಾಗು ಅನೇಕ ಕಟ್ಟಡಗಳು ಇವೆ. ವಾಸ್ತವವಾಗಿ ಸನ್ಯಾಸಿಗಳಂತೂ ಒಂದು ಪೈಸೆಯನ್ನೂ ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ಕಾನೂನು ಬಾಹಿರವಾಗಿದೆ. ಅವರೆಂದಿಗೂ ದಾನಿಗಳಾಗುವುದಿಲ್ಲ, ನಾವೀಗ ತಂದೆಯ ಶ್ರೀಮತದಂತೆ ನಡೆಯಬೇಕು. ಬಾಬಾ ಇದೆಲ್ಲವು ನಿಮ್ಮದಾಗಿದ್ದು ನೀವು ಹೇಳಿದಂತೆ ಸೇವೆಯಲ್ಲಿ ತೊಡಗಿಸುತ್ತೇವೆ. ಈ ರೀತಿ ಬಾಬಾ ಯಾವ ಸಲಹೆಗಳನ್ನು ನೀಡುತ್ತಿರುತ್ತಾರೆ ಅವುಗಳನ್ನು ಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಹೆಜ್ಜೆ ಹೆಜ್ಜೆಯಲ್ಲಿ ತಂದೆಯ ಆದೇಶದಂತೆ ನಡೆಯಬೇಕು. ಸಂಪೂರ್ಣ ಬಲಿಹಾರಿ ಆಗಬೇಕು. ತಂದೆ ಎಲ್ಲಿ ಕುಳಿತುಕೊಳ್ಳಲು ಹೇಳುತ್ತಾರೆ, ಎಂತಹ ಊಟವನ್ನು ತಿನ್ನಿಸುತ್ತಾರೆ.... ಅದರಂತೆ ನಡೆಯುತ್ತಾ ಅವರಿಗೆ ಆಜ್ಞಾಕಾರಿಗಳಾಗಿರಬೇಕು.

2. ನಮ್ಮ ಚಲನೆಯನ್ನು ತುಂಬಾ ಘನತೆ ಹಾಗು ಶ್ರೇಷ್ಠವಾಗಿ ಇಟ್ಟುಕೊಳ್ಳಬೇಕು. ನಾವು ಈಶ್ವರನ ಸಂತಾನರಾಗಿದ್ದೇವೆ ಆದುದರಿಂದ ತುಂಬಾ ರಾಯಲ್ಟಿಯಿಂದ ನಡೆದುಕೊಳ್ಳಬೇಕು. ಎಂದಿಗೂ ಅಳಬಾರದು.

ವರದಾನ: ಸಾಧಾರಣ ಜೀವನದಲ್ಲಿ ಭಾವನೆಯ ಆಧಾರದ ಮೇಲೆ ಶ್ರೇಷ್ಠ ಭಾಗ್ಯವನ್ನು ರೂಪಿಸಿಕೊಳ್ಳುವಂತಹ ಪದಮಾಪದಮ ಭಾಗ್ಯಶಾಲಿ ಭವ.

ಬಾಪ್ದಾದಾರವರಿಗೆ ಸಾಧಾರಣ ಆತ್ಮರೇ ಪ್ರಿಯರಾಗಿದ್ದಾರೆ. ಸ್ವಯಂ ತಂದೆಯೂ ಸಹ ಸಾಧಾರಣ ತನುವಿನಲ್ಲಿಯೇ ಬರುತ್ತಾರೆ. ಇಂದು ಕೋಟ್ಯಾಧಿಪತಿಯೂ ಸಹ ಸಾಧಾರಣವಾಗಿದ್ದಾರೆ. ಸಾಧಾರಣ ಮಕ್ಕಳಲ್ಲಿ ಭಾವನೆಯಿರುತ್ತದೆ ಮತ್ತು ತಂದೆಗೆ ಭಾವನೆಯುಳ್ಳ ಮಕ್ಕಳು ಬೇಕಾಗಿದೆ, ದೇಹ-ಭಾನದಲ್ಲಿ ಇರುವವರಲ್ಲ. ಡ್ರಾಮಾನುಸಾರ ಸಂಗಮಯುಗದಲ್ಲಿ ಸಾಧಾರಣರಾಗುವುದೂ ಭಾಗ್ಯದ ಸಂಕೇತವಾಗಿದೆ. ಸಾಧಾರಣ ಮಕ್ಕಳೇ ಭಾಗ್ಯ ವಿದಾತಾ ತಂದೆಯನ್ನು ತನ್ನವರನ್ನಾಗಿ ಮಾಡಿಕೊಂಡು ಬಿಡುತ್ತಾರೆ. ಆದ್ದರಿಂದ ಅನುಭವ ಮಾಡುತ್ತಾರೆ - ``ಭಾಗ್ಯದಲ್ಲಿ ನನ್ನ ಅಧಿಕಾರವಿದೆ". ಇಂತಹ ಅಧಿಕಾರಿಯೇ ಪದಮಾಪದಮ ಭಾಗ್ಯಶಾಲಿ ಆಗಿ ಬಿಡುತ್ತಾರೆ.

ಸ್ಲೋಗನ್: ಸೇವೆಗಳಲ್ಲಿ ವಿಶಾಲಹೃದಯಿ ಆಗಿದ್ದರೆ ಅಸಂಭವ ಕಾರ್ಯವೂ ಸಂಭವವಾಗುವುದು.